ಕಥೆ

# ಅವರು ಈಗಲೂ ನಗುತ್ತಲೇ ಇದ್ದಾರೆ



**ಮೊಗಳ್ಳಿ ಗಣೇಶ್**

ಕಲೆ: ವಿಶ್ವನಾಥ್ ಎ.ಎಸ್.

ನಿರ್ದಯವಾಗಿ ಕಾಲ ಅಲ್ಲಿ ಅಡ್ಡಾಡುತ್ತಿತ್ತು. ಯಾರ್‍ಯಾರ ಲೆಕ್ಕ ಎಷ್ಟೆಂದು ಎಣಿಸುತ್ತಿತ್ತು. ಬಡಪಾಯಿಗಳು ಬತ್ತಕುಟ್ಟುವ ಒಳಕಲ್ಲಿಗೆ ಸಿಲುಕಿ ನುಚ್ಚಕ್ಕಿಯಾದಂತೆ ಅಲ್ಲಲ್ಲಿ ಸಿಡಿದು ಬಿದ್ದಿದ್ದರು. ಆ ಮೂವರೂ ಅಕ್ಕತಂಗಿಯರು ಹಳೆಕಾಲದ ಪರಸಂಗಗಳ ಲೀಲೆಯಲ್ಲಿ ಮುಳುಗಿದ್ದರು. ಪ್ರಾಯ ಅವರ ಎದೆಯಲ್ಲಿ ಹೂವಿನಂತೆ ಅರಳಿತ್ತು. ಗತಕಾಲದ ನೋವನ್ನೇ ಅವರು ಜೇನ ಸವಿದಂತೆ ಸವಿಯುತ್ತಿದ್ದರು. ಆ ಹಳೆಕಾಲವು ಕಳೆದು ಹೋಗುತಿತ್ತು. ಹೊಸ ಕಾಲ ದಾಹದಲ್ಲಿ ನುಂಗಿಬಿಡುವಂತೆ ಬರುತ್ತಿತ್ತು. ಅದನ್ನವರು ಲೆಕ್ಕಕ್ಕೇ ತೆಗೆದುಕೊಂಡಿರಲಿಲ್ಲ. ಏನು ಬಂದರೇನು ಹೋದರೇನು ಯಾರೇ ಬರಲಿ ಹೋಗಲಿ ನಮ್ಮ ಪಾಡು ನಮ್ಮದು ಎಂದು ಗಲಗಲ ನಗುತ್ತಿದ್ದರು. ಇರುಳು ಅವರ ನಗೆಯ ಪರಿಮಳಕ್ಕೆ ಉರಿಯುತ್ತಿದ್ದ ದೀಪದ ಕುಡಿಯ ಜೊತೆ ಸರಸವಾಡುತ್ತಿತ್ತು. ನಾಳೆ ಈ ಅಕ್ಕತಂಗಿಯರು ಏನಾಗುವರು ಎಂಬುದು ತನಗೆ ಗೊತ್ತು ಎಂಬಂತೆ ಗಾಳಿಯು ಉದಾಸೀನವಾಗಿ ಬೀಸುತ್ತಿತ್ತು. ಅವರ ಅಪ್ಪ ಎಂಡಗುಡುಕ ಸ್ಮಶಾನಕ್ಕೆ ಹೋಗಿದ್ದ. ಅದೇ ಅವನ ಧ್ಯಾನದ ತವರು ಮನೆ. ಎಲ್ಲ ಸತ್ತು ಕೆಟ್ಟ ದೆವ್ವಗಳ ವಾರಸುದಾರ ತಾನೇ ಎಂದು ವಿಪರೀತ ಕಥೆಗಳ ಹೇಳುತ್ತಿದ್ದ. ಆದರೆ ಆತನಿಗೆ ತನ್ನ ಹೆಣ್ಣು ಮಕ್ಕಳತ್ತ ಗಮನವೇ ಇರಲಿಲ್ಲ. ಹಾಗಾಗಿ ಇವರು ಯಾವತ್ತು ಸೂಳೆಯರಾಗಿ ತಮ್ಮ ಬಾಯಿಗೆ ಸಿಗುವರೊ ಎಂದು ಊರ ಕೀಚಕರು ಸಮಯ ಕಾಯುತ್ತಿದ್ದರು. ಆ ಚೆಲುವೆಯರಾದ ಅತ್ತೆಯರ ಕಾಲ ಸಂದಿಯಲ್ಲಿ ಮಲಗಿ ಅವರು ಹೇಳುತ್ತಿದ್ದ ರಮ್ಯ ಕಥೆಗಳ ಏಳೇಳು ಲೋಕಗಳ ಆತ ಕಲ್ಪಿಸಿಕೊಳ್ಳುತ್ತಿದ್ದ. ಆಗ ತಾನೆ ಟಿವಿ ಬಂದಿತ್ತು. ರಾಮಾಯಣದ ಕಥೆ ಅದರಲ್ಲಿ ಬಿತ್ತರವಾಗಿ ಊರಾದ ಊರ ಹೆಂಗಸರೆಲ್ಲ ಅದರ ಮುಂದೆ ಕೂರುತ್ತಿದ್ದರು. ಆ ಚೆಲುವೆಯರಿಗೆ ಯಾಕೊ ಅದು ಹಿಡಿಸುತ್ತಿರಲಿಲ್ಲ. ಪೇಟೆಯ ದಾರಿ ಬನ್ನಿ ಬನ್ನಿ ಎಂದು ಮಾಯಾ ಜಾಲದಲ್ಲಿ ಅವರ ಕರೆಯುತ್ತಿತ್ತು. ತನ್ನ ಅತ್ತೆಯರು ಕಟ್ಟುವ ಕಥೆಗಳ ಮುಂದೆ ಆ ಟಿವಿಯ ಕಥೆ ಯಾರಿಗೆ ಬೇಕು ಎಂದು ಆ ಹುಡುಗ ಶಾಲೆಯ ಪಾಠದ ನಡುವೆಯೂ ಆ ರಮ್ಯ ಕಲ್ಪನಾ